# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.716/ 2022

ಸಿಡಬ್ಲ್ಯೂ ಃ **1**
ಪಿಡಬ್ಲ್ಯೂ ಃ **1**

ದಿನಾಂಕಃ **28-11-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ಅಬ್ದುಲ್ ರಸೂಲ್

ತಂದೆಯ/ಗಂಡನ ಹೆಸರು - ದಸ್ತಗಿರಿ ಸಾಬ್

ವಯಸ್ಸು -? **56** ವರ್ಷ

ಉದ್ಯೋಗ - ಚಾಲಕ

ವಾಸಸ್ಥಳಃ - ನಾಯ್ಕಲ್ ಗ್ರಾಮ.

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ನಾನು ಕಳೆದ 30 ವರ್ಷಗಳಿಂದ ಯಾದಗಿರಿ ಡಿಪೋದಲ್ಲಿ ಚಾಲಕನ್ನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 21.06.2022 ರಂದು ಬೆಳಗ್ಗೆ ಬಸ್ಸಿ ನಲ್ಲಿ ಸರಕುಗಳನ್ನು ತುಂಬಿಕೊಂಡು ಅದನ್ನು ವರ್ಕ್ ಶಾಪ್ ಗೆ ತೆಗೆದುಕೊಂಡು ಹೋಗಿ ಸಂಜೆ 5-00 ಗಂಟೆ ಮರಳಿ ನಾನು ಯಾದಗಿರಿ ಬಸ್ಸು ಡಿಪೋಕ್ಕೆ ಬಂದಿದ್ದೆ. ನಂತರ ನನ್ನ ಕರ್ತವ್ಯದ ಅವಧಿಯು ಮುಗಿದಿತ್ತು ನಂತರ ಘಟಕದಲ್ಲಿ ಚಾಸಾ-4 ರವರಿಗೆ ಮರುದಿವಾಸ ನನ್ನ ಕರ್ತವ್ಯದ ಅವಧಿ ಎಷ್ಟು ಸಮಯಕ್ಕೆ ಇದೆ ಎಂದು ನಾನು ವಿಚಾರಿಸಿದೆ ಅಷ್ಟರಲ್ಲಿ 1 ನೇ ಆರೋಪಿತನು ನನಗೆ ಏ ಬೋಸುಡಿ ಮಗನೇ ಇವತ್ತಿನ ಕರ್ತವ್ಯ ಮುಗಿದಿರುತ್ತದೆ ನಾಳೆದು ಏನು ಕೇಳುತ್ತೀಯ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಅಲ್ಲೆ ಇದ್ದ ಚಾಸಾ-4 ಮತ್ತು 5 ರವರಿಗೆ, 1 ನೇ ಆರೋಪಿತನು ಈ ರೀತಿಯಾಗಿ ನನಗೆ ಮಾತನಾಡುತ್ತಿದ್ದಾನೆ ಎಂದು ನಾನು ಅವರಿಗೆ ತಿಳಿಸಿರುತ್ತೇನೆ. ಅಷ್ಟರಲ್ಲಿ ಚಾಸಾ-4 ಮತ್ತು 5 ರವರು ನನ್ನ ಮುಖ ನೋಡಿ 1 ನೇ ಆರೋಪಿತನು ಕುಡಿದಿರುತ್ತಾನೆ ಹೋಗ್ಲಿ ಬಿಡು ಎಂದು ನನಗೆ ಹೇಳಿದರು. ಅದೇ ರೀತಿ ಚಾಸಾ-4 ಮತ್ತು 5 ರವರು 1 ನೇ ಆರೋಪಿತನಿಗೆ ಬುದ್ದಿಮಾತ ಹೇಳುತ್ತೇವೆ ಎಂದು ನನಗೆ ಹೇಳಿದರು. ಅಷ್ಟರಲ್ಲಿ 2 ನೇ ಆರೋಪಿತನು ಏ

ಬೋಸುಡಿ ಮಗನೇ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. 2 ನೇ ಆರೋಪಿತನು ನನಗೆ ಡಿಸಿಮಿಸ್ ಮಾಡುತ್ತೇನೆ ಹಾಗೂ ಸಸ್ಪೆಂಡ್ ಮಾಡುತ್ತೇನೆ ಇನ್ನೂ 4 ದಿನ ತಡಿ ನಾನು ಲೈನ್‌ಮೇಲೆ ಬಂದು ನಿನ್ನನ್ನು ಎಂತಾಗಂಡಿ ಮಾಡಿಸಿ ಡಿಸ್ ಮಿಸ್ ಮಾಡಿಸುತ್ತೇನೆ ಎಂದು ನನಗೆ ಅಂದಿದ್ದನು. ಅದೇ ರೀತಿ 2 ನೇ ಆರೋಪಿತನು ನನಗೆ ನಾನು ಟ್ರಾಫಿಕ್ ಇನ್ಸ್ ಪೇಕ್ಟರ್ ಇದ್ದೇನೆ ನಿನಗೆ ಕೆಲಸ ಮಾಡಲು ಬಹಳ ಕಷ್ಟ ಆಗುತ್ತದೆ ನಿನು ನಿನ್ನ ಜೀವನ ನೋಾಡಿಕೊಳ್ಳು ಎಂದು ನನಗೆ ಬೈದರಿಕೆ ಹಾಕಿದನು. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ನಂತರ ಪೊಲೀಸರು ಘಟಕಕ್ಕೆ ಬಂದಿದರು ಆವಾಗ ಆರೋಪಿತರು ಓಡಿ ಹೋಗಿದ್ದರು. ಆ ಮೇಲೆ ನೋಡನೋ ಎಂದು ಪೊಲೀಸರು ನನಗೆ ಹೇಳಿದರು. ಮರುದಿವಾಸ ಪೊಲೀಸರು ಆರೋಪಿತರಿಗೆ ಪೋನ್ ಕರೆ ಮಾಡಿದ್ದರು ಆದರೆ ಅವರ ಪೋನ್‌ಗಳು ಸಿಚ್ ಆಫ್ ಇದ್ದವು. ನಂತರ ಪೊಲೀಸರು ಘಟಕಕ್ಕೆ ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ನಂತರ ಪೊಲೀಸರು ನನ್ನ ದೂರನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಪೋಟವನ್ನು ನೋಡಿ ಗುರುತಿಸಿದ್ದು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯ ನುಡಿದ ಕಾರಣ ಪಾಟೀ ಸವಾಲು ಮಾಡಲು ಹಿರಿಯ ಸ.ಸ.ಅ ರವರು ಕೋರಿರುತ್ತಾರೆ. ಅವರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಹಿರಿಯ ಸ.ಸ ಅ ರವರಿಂದಃ

ದಿನಾಂಕಃ 21.06.2022 ರಂದು ಸಂಜೆ 5-30 ಗಂಟೆಗೆ ಆರೋಪಿತರು ನನ್ನನ್ನು ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. ದಿನಾಂಕಃ 21.06.2022 ರಂದು ಘಟನೆ ಆಗಿರುತ್ತದೆ ಎಂದರೆ ಸರಿ. ದಿನಾಂಕಃ 22.06.2022 ರಂದು ನಾನು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ದಿನಾಂಕಃ 23.06.2022 ರಂದು ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ನನ್ನ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಆ ದಿನ ನನ್ನ ಜೊತೆಗೆ ಗಲಾಟೆ ಮಾಡಿದ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಇರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ.ಬಿ.ಬಿ.ಕೆ. ರವರಿಂದಃ

1994 ರಲ್ಲಿ ನಾನು ಚಾಲಕನ್ನಾಗಿ ನೇಮಕಗೊಂಡಿರುತ್ತೇನೆ. ನಾನು ಕಳೆದ 30 ವರ್ಷಗಳಿಂದ ಯಾದಗಿರಿ ಡಿಪೋದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಯಾದಗಿರಿ ಡಿಪೋದಲ್ಲಿ ನಾನು ಹಿರಿಯ ಚಾಲಕನ್ನಾಗಿರುತ್ತೇನೆ ಎಂದರೆ ಸರಿ. ದಿನಾಂಕಃ 21.06.2022 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯ ವರೆಗೆ ನನ್ನ ಸೇವಾ ಕರ್ತವ್ಯ ಇತ್ತು. ದಿನಾಂಕಃ 21.06.2022 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯ ವರೆಗೆ ನನ್ನ ಸೇವಾ ಕರ್ತವ್ಯದ ಅವಧಿ ಇತ್ತು ಎಂದು ನಾನು ದೂರಿನಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ದಿನಾಂಕಃ 21.06.2022 ರಂದು ನಾನು ಸೇವೆಯ ಮೇಲೆ ಹಾಜರು ಇದ್ದೆ ಎಂದು ತೋರಿಸಲು ದಾಖಲೆ ಇರುತ್ತದೆ. ಸದರಿ ದಾಖಲೆಯನ್ನು ನೀವು ಪೊಲೀಸರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ಇದರ ಬಗ್ಗೆ ನಿಯಮ ಇರುತ್ತದೆ ಎಂದು ಹೇಳುತ್ತಾರೆ. ದಿನಾಂಕಃ 21.06.2022 ರಂದು ನೀವು ಸೇವೆಯ ಮೇಲೆ ಹಾಜರು ಇದ್ದ ದಾಖಲಾತಿಯನ್ನು ಪೊಲೀಸರಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಬೆಳಗ್ಗೆ 8 ರಿಂದ ಸಂಜೆ 5 ಗಂಟೆಯ ವರೆಗೆ ಕೆಲಸದ ಅವಧಿ ಇರುತ್ತದೆ ಎಂದು ಹೇಳುತ್ತಾರೆ.

ಶ್ರೀ. ಮಹಿಬೂಬ್. ಅರಕ್ಷಕ ಉಪನಿರೀಕ್ಷಕರು ನನ್ನ ಸಂಬಂಧಿಕರು ಆಗಿರುವುದಿಲ್ಲ. 30 ವರ್ಷದಲ್ಲಿ ನನ್ನನ್ನು ಬೇರೆ ಸ್ಥಳಕ್ಕೆ ವರ್ಗಾವಣೆ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿತರೇ ನನ್ನನ್ನು ಬೇರೆ ಕಡೆ ವರ್ಗಾವಣೆ ಮಾಡಿರುತ್ತಾರೆ ಎಂದು ತಿಳಿದು ಅವರ ಮೇಲೆ ನಾನು ದ್ವೇಶವನ್ನು ಹೊಂದಿದೆ ಎಂದರೆ ಸರಿಯಲ್ಲ. ದಿನಾಂಕಃ 21.06.2022 ರಂದು ಬಸ್ಸಿನಲ್ಲಿ ಟೈರ್, ಪಂಪು, ಬ್ಲೇಡ್, ಕ್ಲಚ್ ಪ್ಲೇಟ್ ಹಾಗೂ ಬಸ್ಸಿ ಗೆ ಸಂಬಂದಪಟ್ಟ ಆಯ್ಯಾಯ ಸಲಕರಣೆಗಳನ್ನು ತೆಗೆದುಕೊಂಡು ಹೋಗಿದೆ. ದಿನಾಂಕಃ 21.06.2022 ರಂದು ಬಸ್ಸಿ ನಲ್ಲಿ ಟೈರ್, ಪಂಪು, ಬ್ಲೇಡ್, ಕ್ಲಚ್ ಪ್ಲೇಟ್ ಹಾಗೂ ಬಸ್ಸಿ ಗೆ ಸಂಬಂದಪಟ್ಟ ಆಯ್ಯಾಯ ಸಲಕರಣೆಗಳನ್ನು ಕಳ್ಳತನದಿಂದ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ನನ್ನ ವಿರುದ್ಧ ದೂರನ್ನು ನೀಡಲು ಹೋಗುವಾಗ ನಾನು ಅವರಿಗೆ ಕ್ಷಮಪಣೆ ಕೇಳಿದೆ ಎಂದರೆ ಸರಿಯಲ್ಲ. ನನ್ನ ಬಸ್ಸಿ ನ ನಿರ್ವಹಾಕನಾದ ಮಲ್ಲಿಕಾರ್ಜುನ ಇದ್ದಾಗ ನಾನು ಬಸ್ಸಿನಲ್ಲಿ ಇದ್ದ ಟಿಕೆಟ್ ಬಾಕ್ಸ್ ನ್ನು ಕಳ್ಳತನ ಮಾಡಿದ್ದೆ ಎಂದರೆ ಸರಿಯಲ್ಲ. ನಂತರ ಸದರಿ ಟಿಕೆಟ್ ಬಾಕ್ಸ್ 2 ತಿಂಗಳು ಆದ ನಂತರ ಡಿಪೋ ದಲ್ಲಿ ಸಿಕ್ಕಿತ್ತು ಎಂದರೆ ಸಾಕ್ಷಿಯು ಇದಕ್ಕೆ ನನ್ನ ಸಂಬಂದ ಇರುವುದಿಲ್ಲ ಎಂದು ಹೇಳುತ್ತಾರೆ. ಆವಾಗ ಆರೋಪಿತರು ನನ್ನ ವಿರುದ್ಧ ದೂರನ್ನು ನೀಡಲು ಹೋಗಿತ್ತಿದ್ದಾಗ ನಾನು ಅವರಿಗೆ ಕ್ಷಮಪಣೆ ಕೇಳಿದೆ ಎಂದರೆ ಸರಿಯಲ್ಲ. ನಿರ್ವಾಹಕನಾದ

ಮಲ್ಲಿಕಾರ್ಜುನ ಇತನು ನನ್ನ ವಿರುದ್ಧ ದೂರನ್ನು ನೀಡಲು ಹೋಗುತ್ತಿದ್ದಾಗ ಆರೋಪಿತರು ಆತನಿಗೆ ನನ್ನ ಸಿಬ್ಬಂದಿ ಇರುತ್ತಾರೆ ಆದ್ದರಿಂದ ನೀನು ದೂರನ್ನು ನೀಡಬೇಡ ಎಂದು ಆತನಿಗೆ ಹೇಳಿದ್ದರು ಎಂದರೆ ಸರಿಯಲ್ಲ. ಡಿಪೋದಲ್ಲಿ ನಾನೇ ಹಿರಿಯನಾಗಿರುವ ಕಾರಣ ಯಾವುದೇ ಕೆಲಸವನ್ನು ಮಾಡಲು ನಾನು ತಯಾರು ಇರುತ್ತಿರಲಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 21.06.2022 ರಂದು ನಾನು ಯಾದಗಿರಿ ಡಿಪೋಕ್ಕೆ ಸಂಜೆ 4-45 ಗಂಟೆ ಬಂದಿದ್ದೆ ಎಂದು ದೂರಿನಲ್ಲಿ ಬರೆಯಿಸಿರುತ್ತೇನೆ. ದಿನಾಂಕಃ 21.06.2022 ರಂದು ನಾನು ಚಾಸಾ-4 ರವರನ್ನು ಕೇಳಲು ಹೋದಾಗ ಅಲ್ಲಿ 3 ಜನರು ಇದ್ದರು. ಗಲಾಟೆ ಶಬ್ದ ಪಕ್ಕದಲ್ಲಿ ಇದ್ದ ಜನರಿಗೆ ಕೇಳುತ್ತದೆ ಎಂದರೆ ಸಾಕ್ಷಿಯು ಶೆಡ್ ದೂರ ಇರುತ್ತದೆ ಎಂದು ಹೇಳುತ್ತಾರೆ. 2 ನೇ ಆರೋಪಿತನು ನನ್ನನ್ನು ಸೇವೆಯಿಂದ ವಜಾಮಾಡುತ್ತೇನೆ ಎಂದು ಹೇಳಿದನು ನಾನು ದೂರಿನಲ್ಲಿ ಬರೆಯಿಸಿರುತ್ತೇನೆ. ಚಾಸಾ-4 ಮತ್ತು 5 ರವರು 1 ನೇ ಆರೋಪಿತನು ಕುಡಿದು ಬಂದಿದನು ಎಂದು ನಾನು ದೂರಿನಲ್ಲಿ ಬರೆಯಿಸಿರುವುದಿಲ್ಲ. ನಾನು ಸ್ವ-ಇಚ್ಚೆಯಿಂದ ದೂರನ್ನು ಬರೆದುಕೊಟ್ಟಿರುತ್ತೇನೆ.

ಯಾದಗಿರಿ ಡಿಪೋದಿಂದ ಯಾದಗಿರಿ ನಗರ ಪೊಲೀಸ್ ಠಾಣೆಯು 3 ಕಿ.ಮೀ ಅಂತರದಲ್ಲಿ ಇರುತ್ತದೆ. 3 ಕಿ.ಮೀ ಅಂತರವನ್ನು 10 ನಿಮಿಷ್ಯ ಕ್ರಮಿಸಬಹುದು ಎಂದರೆ ಸರಿ. ಗಲಾಟೆಯು ಅರ್ಧ ಗಂಟೆಯ ವರೆಗೆ ಆಗಿರುತ್ತದೆ. ಸದರಿ ಗಲಾಟೆಯಲ್ಲಿ 30 ರಿಂದ 35 ಜನರು ಸೇರಿದ್ದರು. ಸದರಿ ಗಲಾಟೆಯಲ್ಲಿ ಸೇರಿದ ಜನರ ಹೆಸರು ನನಗೆ ಹೇಳಲು ಬರುವುದಿಲ್ಲ. ಸದರಿ ಗಲಾಟೆಯಲ್ಲಿ ಸೇರಿದ ಜನರಲ್ಲಿ ನಮ್ಮ ಡಿಪೋದ ಚಾಲಕ ಮತ್ತು ನಿರ್ವಹಾಕರು ಇರಲಿಲ್ಲ.

ದಿನಾಂಕಃ 21.06.2022 ರಂದು ಏಕೆ ನೀವು ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನಾನು ದೂರನ್ನು ಕೊಡಲು ಹೋಗಿದೆ ಆವಾಗ ಆರಕ್ಷಕ ಉಪನೀರಿಕ್ಷಕರು ಇರಲಿಲ್ಲ ಅವರು ಬೇರೆ ಕಡೆ ಹೋಗಿರುತ್ತಾರೆ ಎಂದು ಅಲ್ಲಿ ಇದ್ದ ಪೊಲೀಸರು ನನಗೆ ಹೇಳಿದ್ದರು. ದಿನಾಂಕಃ 21.06.2022 ರಂದು ಪೊಲೀಸರು ನನ್ನ ದೂರನ್ನು ನಾಳೆ ಸ್ವೀಕರಿಸುತ್ತೇವೆ ಎಂದು ನನಗೆ ಹೇಳಿದ್ದರು.

ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದೆ ಇದ್ದರು ಸಹ ಅವರ ವಿರುದ್ಧ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ನನ್ನ ಸಂಬಂಧಿಕರು ಆಗಿರುವುದಿಲ್ಲ. ಚಾಸಾ-2 ಮತ್ತು 3 ರವರು ಯಾದಗಿರಿಯಲ್ಲಿ ಇರುತ್ತಾರೆ ಅವರು ಗಲಾಟೆ ನಡೆದಾಗ ಬಂದಿದ್ದರು. ಚಾಸಾ-2 ಮತ್ತು 3 ರವರು ಗಲಾಟೆ ನಡೆದಾಗ ಬಂದಿದ್ದರು ಎಂದು ನಾನು ದೂರಿನಲ್ಲಿ

ಬರೆಸಿರುವುದಿಲ್ಲ. ಚಾಸಾ-2 ಮತ್ತು 3 ರವರು ಬಸ್ಸು ನಿಲ್ದಾಣದಲ್ಲಿ ಇದ್ದರು ಆವಾಗ ಅವರು ಅಲ್ಲಿ ಬಂದಿದ್ದರು. ಚಾಸಾ-2 ಮತ್ತು 3 ರವರು ಗಲಾಟೆ ಸಮಯದಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ನನ್ನ ಸಂಬಂಧಿಕರು ಆಗಿರುವ ಕಾರಣ ನಾನು ಅವರನ್ನು ಗುನ್ಹಾ ಸ್ಥಳಕ್ಕೆ ಕರೆದುಕೊಂಡು ಅವರ ಜೊತೆಗೆ ಛಾಯಚಿತ್ರಗಳನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ ಡಿಪೋದಲ್ಲಿ ಇದ್ದ ಹಿರಿಯ ಅಧಿಕಾರಿಗಳು ನನಗೆ ಯಾವುದೇ ಕೆಲಸವನ್ನು ಹೇಳಿದ್ದರು ಸಹ ನಾನು ಅವರ ವಿರುದ್ಧ ದೂರನ್ನು ನೀಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ದೂರನ್ನು ನೀಡಲು ಏಕೆ ನಿಮ್ಮಗೆ ತಡ ಆಗಿರುತ್ತದೆ ಎಂದು ಕಾರಣ ಹೇಳಲು ಬರುತ್ತಾದೆಯೇ ಎಂದರೆ ಸಾಕ್ಷಿಯು ಗಲಾಟೆ ಆದ ಅರ್ಧ ಗಂಟೆಯಲ್ಲಿ ನಾನು ದೂರನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ. ಚಾಸಾ-4 ಮತ್ತು 5 ರವರು ಹಾಗೂ ಉಳಿದ ಸಾಕ್ಷಿದಾರರು ಗಲಾಟೆ ಸ್ಥಳದಲ್ಲಿ ಇದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಬಂದು ನನ್ನ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರಕ್ಷಕರ ಉಪನೀರಿಕ್ಷಕರು ಪಂಚನಾಮೆ ಮಾಡಲು ಬಂದಿರುವುದಿಲ್ಲ ಆದರೆ ಅವರ ಸಿಬ್ಬಂದಿಯವರು ಬಂದಿದ್ದರು.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.